ಓ.ಎಸ್. 143/2020 **ಪಿ.ಡಬ್ಲೂಃ 1**

ಸಾಕ್ಷಿಯನ್ನು ದಿಃ **24.01.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ. ವಕೀಲ**ರಿಂದ**

ನಾನು ಈ ದಾವೆಯನ್ನು ನನ್ನ ಪಿತ್ರಾರ್ಜಿತ ಸ್ವತ್ತಿನಲ್ಲಿ ಭಾಗಂಶ ಕೋರಿ ಪ್ರತಿವಾದಿಗಳ ವಿರುದ್ಧ ಕೋರಿರುತ್ತೇನೆ. ನಾನು ಈ ಭಾಗಾಂಶದ ದಾವೆಯಲ್ಲಿ ನಮ್ಮ ಆಸ್ತಿಗಳನ್ನು ಮತ್ತು ಪ್ರತಿವಾದಿಗಳಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ಸೇರಿಸಿದ್ದೇನಾ ಎಂದರೆ ಸಾಕ್ಷಿ ಎಲ್ಲಾ ಸೇರಿಸಿದ್ದೇವೆ ನಮ್ಮ ಸ್ವಯಾರ್ಜಿತ ಆಸ್ತಿಗಳನ್ನು ಸೇರಿಸಿಲ್ಲ ಎನ್ನುತ್ತಾರೆ. ನನ್ನ ಸ್ವಯಾರ್ಜಿತ ಆಸ್ತಿಗಳೆಂದರೆ ಸರ್ವೆ ನಂ. 111/1 ಎ, ಸರ್ವೆ ನಂ. 111/1 ಬಿ, ಸರ್ವೆ ನಂ.189 ಮತ್ತು ಸರ್ವೆ ನಂ.132 ಇವುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ. ಈ ಸ್ವತ್ತುಗಳು ನಮ್ಮ ಸ್ವಯಾರ್ಜಿತ ಎಂದು ಕಾಣಿಸಲು ದಾಖಲೆಗಳು ಇವೆ, ಈಗಾಗಲೆ ಹಾಜರು ಪಡಿಸಿದ್ದೇವೆ. ಈ ಆಸ್ತಿಗಳನ್ನು ನನ್ನ ಅಜ್ಜಿ ಸುಬ್ಬಮ್ಮ ಸಂಪಾದನೆ ಮಾಡಿ ನಮ್ಮ ತಂದೆ ಹೆಸರಿಗೆ ಮಾಡಿಕೊಟ್ಟಿದ್ದಾರೆ. ಸುಬ್ಬಮ್ಮ ವ್ಯವಸಾಯ ಮಾಡುತ್ತಿದ್ದರು. ಸುಬ್ಬಮ್ಮನವರಿಗೆ ಅವರ ತವರು ಮನೆಯಿಂದ ಸುಮಾರು 8 ಎಕರೆ ಜಮೀನನ್ನು ಅವರ ತಂಗಿ ಕೆಂಪಮ್ಮನವರು ತೆಗೆಸಿಕೊಟ್ಟಿದ್ದರು. ಅವರ ತವರು ಮನೆ ಆಸ್ತಿಗಳನ್ನು ಕೆಂಪಮ್ಮ ಇಟ್ಟುಕೊಂಡಿದ್ದರು. ಇದನ್ನು ತೋರಿಸಲು ದಾಖಲೆಗಳನ್ನು ಈಗಾಗಲೆ ಹಾಜರು ಪಡಿಸಿದ್ದೇನೆ. ಸಾಕ್ಷಿಗೆ ಅವರು ಹಾಜರುಪಡಿಸಿರುವ ದಾಖಲಾತಿಗಳನ್ನು ಕೊಟ್ಟು ಇದರಲ್ಲಿ ಇಂದು ನಾನು ಹೇಳಿರುವ ಸ್ವತ್ತುಗಳ ದಾಖಲಾತಿ ಯಾವಯಾವವು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲಾತಿಗಳನ್ನು ಪರಿಶೀಲಿಸಿ ಇದರಲ್ಲಿ ನಾನು ಹೇಳಿದಂತಹ ದಾಖಲೆಗಳು ಇಲ್ಲ ಎನ್ನುತ್ತಾರೆ. ಪುನಃ ಸಾಕ್ಷಿ ನುಡಿಯತ್ತಾರೆ ಕೆಂಪಮ್ಮ ಸುಬ್ಬಮ್ಮನವರಿಗೆ ನೇರವಾಗಿ ಮಾಡಿಕೊಟ್ಟಿರಲಿಲ್ಲ ಆದರೆ ನನ್ನ ತಂದೆಯಾದ ತಿಮ್ಮೇಗೌಡರಿಗೆ ತೆಗೆದುಕೊಟ್ಟಿದ್ದರು ಎನ್ನುತ್ತಾರೆ. ಕೆಂಪಮ್ಮ ನ ಹೆಸರಿನ ದಾಖಲೆಗಳು ಇಲ್ಲ ಎನ್ನುತ್ತಾರೆ.

ನನ್ನ ಹೆಸರು ಸುಬ್ಬಮ್ಮ. ಸುಬ್ಬಮ್ಮನವರಿಗೆ ಹೊಸೂರಿನಲ್ಲಿ ರಾಮಕೃಷ್ಣೇಗೌಡ ಎಂಬ ಮಗ ಇದ್ದಾರೆ ಎಂದರೆ ಅದು ಮಹಾ ಸುಳ್ಳು. ಸದರಿ ರಾಮಕೃಷ್ಣೇಗೌಡ ಒಂದು ದೊಡ್ಡ ಕುಟುಂಬದವರು

ಎಂದರೆ ಸುಳ್ಳು, ಅವರಿಗೂ ನಮಗೂ ಯಾವುದೆ ಸಂಬಂಧ ಇಲ್ಲ. ಸುಬ್ಬಮ್ಮನವರನ್ನು ನಾನು ನೋಡಿದ್ದೆ. ಅವರು ಈಗ್ಗೆ 1991 ರಲ್ಲಿ ಮರಣ ಹೊಂದಿದ್ದಾರೆ. ಸುಬ್ಬಮ್ಮ 1991 ರಲ್ಲಿ ಮರಣ ಹೊಂದಿದ್ದಾರೆ ಎಂಬ ದಾಖಲೆ ಕೊಟ್ಟಿಲ್ಲ. ಅವರ ಮರಣ ದೃಡೀಕೃತ ಪತ್ರವನ್ನು ಹಾಜರು ಪಡಿಸಿದರೆ ಅವರ ವಿವರಗಳು ಗೊತ್ತಾಗುತ್ತದೆ ಎಂದೆ ನಿಜಾಂಶವನ್ನು ಮರೆಮಾಚುವ ಸಲುವಾಗಿ ಸದರಿ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸುಬ್ಬಮ್ಮನವರನ್ನು ಹೊನಕೆರೆಗೌಡ ಎಂಬುವರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸುಳ್ಳು, ಅವರನ್ನು ತಮ್ಮೇಗೌಡರಿಗೆ ಮದುವೆ ಮಾಡಿದ್ದರು ಎನ್ನುತ್ತಾರೆ. ಸುಬ್ಬಮ್ಮ ನವರನ್ನು ಹೊಸೂರು ಹೊನಕೆರೆಗೌಡರಿಗೆ ಕೊಟ್ಟು ಮದುವೆ ಮಾಡಿದ್ದು ಅವರಿಗೆ ರಾಮಕೃಷ್ಣೇಗೌಡ ಎಂಬ ಮಗನಿದ್ದು, ಅವರು ದೊಡ್ಡ ಕುಟುಂಬಕ್ಕೆ ಸೇರಿದವರಾಗಿದ್ದಾರೆ ಎಂದರೆ ಸುಳ್ಳು. ಸುಬ್ಬಮ್ಮನವರು ತಮ್ಮೇಗೌಡರನ್ನು ಮದುವೆ ಆಗಿರಲಿಲ್ಲ ಆದರೂ ನಾನು ಸುಳ್ಳು ಹೇಳಿಕೊಂಡು ಪ್ರತಿವಾದಿಗಳ ವಿರುದ್ಧ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಅಪ್ಪಾಜಿಗೌಡರಿಗೆ ತಮ್ಮೇಗೌಡ ಅಲಿಯಾಸ್ ತಮ್ಮಣ್ಣೇಗೌಡ ಮತ್ತು ಸೋಮೆಗೌಡ ಎಂಬ ಇಬ್ಬರೂ ಮಕ್ಕಳು ಎಂದರೆ ಸರಿ. ಸದರಿ ತಮ್ಮೇಗೌಡ ಅಲಿಯಾಸ್ ತಮ್ಮಣ್ಣೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ.ಅವರಲ್ಲಿ ಮೊದಲನೆ ಹೆಂಡತಿ ಪುಟ್ಟತಾಯಮ್ಮ 2 ನೇ ನಾಚಾರಮ್ಮ ಎಂದರೆ ಸರಿಯಿಲ್ಲ. ನಾಚಾರಮ್ಮ ಎಂಬುವವರು ಇರುವುದಿಲ್ಲ, ಆದರೆ ಪುಟ್ಟತಾಯಮ್ಮ ನವರು ಮರಣ ಹೊಂದಿನ ನಂತರ ಸುಬ್ಬಮ್ಮನವರಿಗೆ ಮದುವೆ ಆಗಿರುತ್ತಾರೆ. ಸುಬ್ಬಮ್ಮ ನವರು ತಮ್ಮೇಗೌಡರ ಹೆಂಡತಿ ಅಲ್ಲ ಅವರನ್ನು ಹೊನಕೆರೆಗೌಡರಿಗೆ ಮದುವೆ ಮಾಡಿ ಕೊಟ್ಟಿದ್ದರು ಎಂದರೆ ಸುಳ್ಳು. ಸುಬ್ಬಮ್ಮನವರಿಗೆ ರಾಮಕೃಷ್ಣೇಗೌಡ ಎಂಬ ಮಗ ಕೂಡ ಇದ್ದಾರೆ ಎಂದರೆ ಸುಳ್ಳು. ಪುಟ್ಟತಾಯಮ್ಮನಿಗೆ ಶಿವಣ್ಣೇಗೌಡ ಅಲಿಯಾಸ್ ಸಿದ್ದೇಗೌಡ ಮತ್ತು ಚಂದ್ರೇಗೌಡ ಎಂಬ ಇಬ್ಬರೂ ಗಂಡು ಮಕ್ಕಳು ಎಂದರೆ ಸುಳ್ಳು, ಪುಟ್ಟತಾಯಮ್ಮನಿಗೆ ಮಕ್ಕಳು ಇರಲಿಲ್ಲ, ಈಗ ಹೇಳಿದಂತೆ ಇಬ್ಬರು ಸೋಮೆಗೌಡರ ಮಕ್ಕಳು ಎನ್ನುತ್ತಾರೆ. ಅವರಿಬ್ಬರೂ ಸೋಮೆಗೌಡರ ಮಕ್ಕಳು ಎಂದು ತೋರಿಸಲು ದಾಖಲೆ ಇದೆ, ಸಾಕ್ಷಿ ಪುನಃ ನುಡಿಯುತ್ತಾರೆ ಅವರ ಹೆಸರು ಶಿವಣ್ಣ ಬಿನ್ ಸೋಮೆಗೌಡ ಆದರೆ ಶಿವಣ್ಣೇಗೌಡ ಎಂಬುವವರು ಇರುವುದಿಲ್ಲ. ವಾದಿಯ

ಆಸ್ತಿಯನ್ನು ಗಬಳಿಸುವ ಸಲುವಾಗಿ ಮಾತು ಮಾತಿಗೆ ಹೇಳಿಕೆಗಳನ್ನು ಬದಲಾಯಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಣ್ಣೇಗೌಡ ಅಲಿಯಾಸ್ ಸಿದ್ದೇಗೌಡರಿಗೆ 4 ಜನ ಮಕ್ಕಳು ಎಂದರೆ ಶಿವಣ್ಣೇಗೌಡ ಎಂಬುವುದು ಸುಳ್ಳು ಆದರೆ ಶಿವಣ್ಣನಿಗೆ 4 ಜನ ಮಕ್ಕಳು ಎಂದರೆ ಸರಿ.

ನಾನು ನಿಪಿ. 81 ರಿಂದ 83 ರಲ್ಲಿ ಹಾಜರು ಪಡಿಸಿರುವ ದಾಖಲೆಗಳಲ್ಲಿರುವ ಸ್ವತ್ತುಗಳನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಿದ್ದೇನೆ. ಸದರಿ ಸ್ವತ್ತುಗಳನ್ನು ನನ್ನ ದಾವಾದಲ್ಲಿ ತೋರಿಸಿದ್ದೇನೆ. ಅದೇ ರೀತಿ ನಿಪಿ. 81 ರಿಂದ 83 ರಲ್ಲಿ ಹಾಜರು ಪಡಿಸಿರುವ ಸ್ವತ್ತುಗಳು ಹಾಗೂ ತಂಬಾಕು ಬೆಳೆಗಾರರ ಪಾಸ್ ಬುಕ್ ಬಗ್ಗೆ ನನ್ನ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸೇರಿಸಿದ್ದೇನೆ. ಈ ದಾಖಲೆಗಳ ಸ್ವತ್ತುಗಳನ್ನು ಈ ದಾವಾದಲ್ಲಿ ಸೇರ್ಪಡೆ ಮಾಡದೆ ಇದ್ದರೂ ಸೇರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೂ ಮತ್ತು ವಾದಿಯವರಿಗೂ ಯಾವುದೆ ಸಂಬಂಧ ಇಲ್ಲ ಅದೆ ರೀತಿ ಸುಬ್ಬಮ್ಮನವರಿಗೂ ಮತ್ತು ಪ್ರತಿ ವಾದಿಗಳಿಗೂ ಸಂಬಂಧ ಇಲ್ಲದೆ ಇದ್ದರೂ ಕೂಡಾ ನಾನು ಸುಳ್ಳು ಸಂಬಂಧವನ್ನು ಸೃಷ್ಟಿ ಮಾಡಿಕೊಂಡು ಪ್ರತಿವಾದಿಗಳ ಸ್ವತ್ತನ್ನು ಲಪಟಾಯಿಸಲು ಸುಳ್ಳು ಹೇಳಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.